ಅ) ರಾಣೆಬೆನ್ನೂರು ನಗರದಲ್ಲಿ 2ಸಾವಿರ ಬೀಡಿ ಕಾರ್ಮಿಕರಿಗೆ ಮನೆ ಕಟ್ಟುವ ಸಲುವಾಗಿ ಆಶ್ರಯ ಯೋಜನೆಯಡಿ ನಿವೇಶನಗಳನ್ನು ರಾಣೆಬೆನ್ನೂರು ತಾಲ್ಲೂಕು ಮಾಗೋಡ ಗ್ರಾಮದಲ್ಲಿ 100 ಎಕರೆ ಹುಲ್ಲುಗಾವಲನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

ಆ) ನಿವೇಶನಗಳಿಗೆ ಹುಲ್ಲುಗಾವಲನ್ನು ಡಿಸ್‌ಅಸೈನ್ ಮಾಡುವ ಅಧಿಕಾರವು ಆಯಾ ಜಿಲ್ಲಾಧಿಕಾರಿಗಳಿಗೆ ಇದ್ದರೂ ಸಹಾ ವಿಳಂಬವಾಗಲು ಕಾರಣವೇನು ?

ಶ್ರೀ ಆರ್. ಗೋವಿನಾಥ ಸಾಂಡ್ರ (ವಸತಿ ಸಚಿವರು):-

ಅ) ಇಲ್ಲ. ಆದರ 100 ಎಕರೆ ಹುಲ್ಲುಗಾವಲನ್ನು ಡಿಸ್‌ಅಸೈನ್ ಮಾಡುವಂತೆ ಟಾಸ್ಕ್‌ಫೋರ್ಸ್ ಸಮಿತಿ ರಾಣೆಬೆನ್ನೂರು ಅವರ ಕೋರಿಕೆ ಧಾರವಾಡ ಜಿಲ್ಲಾಧಿಕಾರಿಗಳ ಮುಂದಿದೆ.

ಆ) ಈಗಾಗಲೇ 50 ಎಕರೆ ಭೂಮಿಯನ್ನು ಆಶ್ರಯ ಯೋಜನೆಗಾಗಿ ಜಿಲ್ಲಾಧಿಕಾರಿ, ಧಾರವಾಡ ಇವರ ಆದೇಶ ಸಂಖ್ಯೆ : ಎಲ್‌ಎಸ್‌ಡಿ ಸಿ.ಆರ್. 169:92-93, ದಿ:10-9-1992ರ ಪ್ರಕಾರ ಡಿಸ್‌ಅಸೈನ್ ಮಾಡಲಾಗಿದೆ. ಇದಲ್ಲದೆ 30 ಎಕರೆ ಭೂಮಿಯನ್ನು ಯುಟಿಪಿಯ ಸಿಬ್ಬಂದಿ ವಸೂಲಿಗಾಗಿ ಡಿಸ್‌ಅಸೈಡ್ ಮಾಡಲು ಬೆಳಗಾಂ ವಿಭಾಗಾಧಿಕಾರಿಗಳ ಮೂಲಕ 23-2-93ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಉಳಿದ ಹುಲ್ಲುಗಾವಲು ಜಾನುವಾರುಗಳ ಮೇವಿಗೆ ಅತ್ಯವಶ್ಯವಿದೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 12-3-93ರ ಲಿಖಿತ ಮೂಲಕ ಉತ್ತರಿಸುವ 18ನೇ ಪಟ್ಟಿಯಲ್ಲಿರುವ 62 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 1150, 1877, 1876, 1875, 1916, 1918, 1960, 1833, 1974, 1973, 1830, 1838, 1098, 1682, 174 ಮತ್ತು 83 ಎ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 46 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER:- Question Hour is over.

ಗುಬ್ಬಿ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗಾರರಿಗೆ ನೀಡಿರುವ ನೆರವು

1104 (1613): ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆ ಬೆಳೆಯುವ ಜಮೀನಿನ ವಿಸ್ತೀರ್ಣವೆಷ್ಟು;

ಆ) ರೇಷ್ಮೆ ಹುಳು ಸಾಕಲು ಸಹಾಯಧನರೂಪದಲ್ಲಿ ತಟ್ಟೆ ಮತ್ತು ಚಂದ್ರಿಕೆಗಳನ್ನು ಕೊಡಲಾಗಿರುವ ಜನರ ಸಂಖ್ಯೆ ಎಷ್ಟು ?

(ಹೋಬಳಿವಾರು ಜಾತಿವಾರು ಪೂರ್ಣ ಹೆಸರಿನೊಂದಿಗೆ ವಿವರ ನೀಡುವುದು)

ಶ್ರೀ ಡಾ.ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):-

ಅ) 1017 29 ಎಕರೆಗಳಲ್ಲಿದೆ.

ಆ) ಪರಿಶಿಷ್ಟ ಜಾತಿಯವರಿಗೆ ಮಾತ್ರ ತಟ್ಟೆ ಮತ್ತು ಚಂದ್ರಿಕೆಗಳನ್ನು ಕೊಡಲಾಗುತ್ತಿದೆ. ಆದರಂತೆ 31 ಜನರಿಗೆ ಕೊಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

ರೇಷ್ಮೆ-ಹುಳು ಸಹಾಯಧನ ರೂಪದಲ್ಲಿ ತಟ್ಟೆ ಮತ್ತು ಚಂದ್ರಿಕೆಗಳನ್ನು ಕೊಡಲಾಗಿರುವ ಜನರ ಹೆಸರು ಹೋಬಳಿವಾರು ವಿವರ:-

1. ಕೇಂದ್ರ ನೆರವಿನ ಯೋಜನೆ:-

ಕ್ರ. ಸಂ.	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಮಂಡಲ್	ಹೋಬಳಿ	ತಟ್ಟೆ	ಚಂದ್ರಿಕೆ
1	2	3	4	5	6
1.	ನಂಜುಂಡಯ್ಯ ಬಿನ್ ವಿ. ತಿಮ್ಮಯ್ಯ ಕೋಣನಕೆರೆ	ಗೋಪಾಲಪುರ	ಕಸಬ	20	10
2.	ರಂಗಸ್ವಾಮಯ್ಯ ಬಿನ್ ಚನ್ನಪ್ಪ ಮಲ್ಲನಹಳ್ಳಿ	"	"	20	10
3.	ದೊಡ್ಡರಂಗಯ್ಯ ಬಿನ್ ರಂಗಯ್ಯ ನಂದಿಪುರ	"	"	20	10
4.	ರಂಗಸ್ವಾಮಯ್ಯ ಬಿನ್ ರಂಗಯ್ಯ, ನಂದಿಪುರ	"	"	20	10
5.	ರಾಮಣ್ಣ ಬಿನ್ ರಂಗಜ್ಜಯ್ಯ ನಂದಿಪುರ	"	"	20	10
6.	ಬೋರಯ್ಯ ಬಿನ್ ದೊಡ್ಡರಂಗಯ್ಯ ಬಿ. ಹೊಸಪಟ್ಟಿ	"	"	20	10
7.	ಹನುಮಂತಯ್ಯ ಬಿನ್ ಮೂಡ್ಲಗಿರಿಯ್ಯ ಪಮ್ಮನಹಳ್ಳಿ	"	"	20	10
8.	ವೆಂಕಟಯ್ಯ ಬಿನ್ ಹಟ್ಟಿನರಸಯ್ಯ ದೊಡ್ಡ ಕಟ್ಟಿಗೆನಹಳ್ಳಿ	"	"	20	10
9.	ಮಂಜಯ್ಯ ಬಿನ್ ನರಸಿಂಹಯ್ಯ ಬಿ.ಕೆ. ಗುಡ್ಡಕಾವಲ್	"	"	20	10
10.	ಮಾಗಡಯ್ಯ ಬಿನ್ ಬುಡ್ಡರಂಗಯ್ಯ ಬಿ.ಕೆ. ಗುಡ್ಡಕಾವಲ್	"	"	20	10
11.	ನಂಜಯ್ಯ ಬಿನ್ ಪುಟ್ಟರಂಗಯ್ಯ, ರಂಗನಾಥಪುರ	ಎಂ.ಹೆಚ್.ಪಟ್ಟಿ	ಗುಬ್ಬಿ ಕಸಬ	20	10
12.	ನಂಜುಂಡಯ್ಯ ಬಿನ್ ನರಸಿಂಹಯ್ಯ, ರಂಗನಾಥಪುರ	ಎಂ.ಹೆಚ್.ಪಟ್ಟಿ	ಗುಬ್ಬಿ ಕಸಬ	20	10

13.	ಗೋವಿಂದಯ್ಯ ಬಿನ್ ತಿಮ್ಮಯ್ಯ ಪಿ. ಕೋಡಿಗೇಹಳ್ಳಿ	ಮಾಪಿನಹಳ್ಳಿ	ಪಿ.ಎಸ್. ಪುರ	20	10
14.	ಸಂಜೀವಯ್ಯ ಬಿನ್ ಕೊಣಗಯ್ಯ ಹೊಸಹಳ್ಳಿ	"	"	20	10
15.	ಹನುಮಯ್ಯ ಬಿನ್ ಕೆಂಪಹನುಮಯ್ಯ, ಶೆಟ್ಟಿಗೆರೆ	"	"	20	10
16.	ಕೃಷ್ಣಯ್ಯ ಬಿನ್ ದೊಡ್ಡ ರಂಗಯ್ಯ, ಬ್ಯಾಡಗೆರೆ	ಕಡಬ	ಕಡಬ	20	10
17.	ರಾಜಶೆಟ್ಟಿ ಬಿನ್ ಲೇಟ್ ತಿಮ್ಮಶೆಟ್ಟಿ, ಹೆಂಜಾರನಹಳ್ಳಿ	"	"	20	10
18.	ಬೈರಯ್ಯ ಬಿನ್ ಭೀಮಯ್ಯ ಗೌರೀಪುರ	ಚೇಳೂರು	ಚೇಳೂರು	20	10
19.	ನರಸಯ್ಯ ಬಿನ್ ರಂಗಯ್ಯ ಎಂ.ಎಂ.ಎ. ಕಾವಲ್	ಚೇಳೂರು	ಚೇಳೂರು	20	10
20.	ದೊಡ್ಡಕೆಂಚಯ್ಯ ಬಿನ್ ಸಣ್ಣ ಕೆಂಪಯ್ಯ, ಕುಂದುರನಹಳ್ಳಿ	ನಿಟ್ಟೂರು	ನಿಟ್ಟೂರು	20	10
			ಒಟ್ಟು	400	200

2.ರಾಜ್ಯವತಿ ಯೋಜನೆ:-

ಕ್ರ. ಸಂ.	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಮಂಡಲ್	ಹೋಬಳಿ	ತಟ್ಟಿ	ಚಂದ್ರಿಕೆ
1	2	3	4	5	6
1.	ಗೋವಿಂದಯ್ಯ ಬಿನ್ ದೊಡ್ಡವೆಂಕಟಯ್ಯ ಅವರೇಹಳ್ಳಿ	ಮಾವಿನಹಳ್ಳಿ	ಪಿ.ಎಸ್. ಪುರ	20	10
2.	ಕೆಂಪಮ್ಮ ಕೋಂ ಹಟ್ಟಿ ನರಸಯ್ಯ, ಅವರೇಹಳ್ಳಿ	"	"	5	5
3.	ದೊಡ್ಡಯ್ಯ ಬಿನ್ ಹನುಮಂತಯ್ಯ, ಬ್ಯಾಡಗೆರೆ	ಕಡಬ	ಕಡಬ	20	20
4.	ಮಾರನರಸಯ್ಯ ಬಿನ್ ಕದ್ರಯ್ಯ, ಚಿಕ್ಕಾ ಸಾಗರಪಾಳ್ಯ	ಮಾವಿನಹಳ್ಳಿ	ಪಿ.ಎಸ್.ಪುರ	5	5
5.	ಕೆ ಪಿ. ಮರಿಯಪ್ಪ ಬಿನ್ ಕಾಳಯ್ಯ, ಕಟ್ಟಸಹಳ್ಳಿ	ಕಡಬ	ಕಡಬ	20	10
6.	ನರಸಯ್ಯ ಬಿನ್ ರಾಮಯ್ಯ ಮುಸಕೊಂಡ್ಲಿ	ನಿಟ್ಟೂರು	ನಿಟ್ಟೂರು	20	10

7.	ರಾಮಚಂದ್ರಯ್ಯ ಬಿನ್ ಹನುಮಂತಯ್ಯ, ಗೌರೀಪುರ	ಚೇಳೂರು	ಚೇಳೂರು	20	10
8.	ವೆಂಕಟಗಿರಯ್ಯ ಬಿನ್ ಹನುಮಂತಯ್ಯ, ಗೌರೀಪುರ	"	"	20	10
9.	ಸಿದ್ದಯ್ಯ ಬಿನ್ ತಿಮ್ಮಯ್ಯ ಮುನಿಯಪ್ಪನ ಪಾಳ್ಯ	"	"	20	10
10.	ತಿಮ್ಮಯ್ಯ ಬಿನ್ ದಾಸಪ್ಪ ಮುನಿಯಪ್ಪನ ಪಾಳ್ಯ	ಚೇಳೂರು	ಚೇಳೂರು	20	10
11.	ಚಿಕ್ಕಮಾದಮ್ಮ ಕೋಂ ಮೈಲಾರಯ್ಯ ಶೆಟ್ಟಿಹಳ್ಳಿ	ಹೊಸಕೆರೆ	ಹಾಗಲ್ಬಡಿ	20	10

ರಾಜ್ಯದಲ್ಲಿ ಹರಿಜನರಿಗೆ ಅಂಬೇಡ್ಕರ್ ಮನೆಗಳ ನಿರ್ಮಾಣ

1105 (1128): ಶ್ರೀ ಎ. ರುಕ್ಮಯ್ಯ ಪೂಜಾರಿ (ಪಿಟ್ಲ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992-93ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಹರಿಜನರಿಗೆ ಅಂಬೇಡ್ಕರ್ ಮನೆಗಳು ಮಂಜೂರಾಗಿದೆಯೇ;

ಆ) ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 100 ಮನೆಗಳು ಮಂಜೂರಾಗಿರುವುದು ನಿಜವೆ;

ಇ) ಫಲಾನುಭವಿಗಳ ಆಯ್ಕೆ ಆಗಿದೆಯೇ ? ಅಂಬೇಡ್ಕರ್ ಮನೆಗಳ ಕೆಲಸ ಪ್ರಾರಂಭಿಸುವುದು ಯಾವಾಗ ?

ಶ್ರೀ ಗೋಪಿನಾಥ ಆರ್. ಸಾಂತ್ರ (ವಸತಿ ಸಚಿವರು):–

ಅ) ಸರ್ಕಾರಿ ಆದೇಶ ಸಂ. ಹೆಚ್‌ಯುಡಿ 138 ಪಿಹೆಚ್‌ಎಸ್ 9 ದಿನಾಂಕ 28:12:91 ಮತ್ತು ಹೆಚ್‌ಯುಡಿ 239ಕೆಹೆಚ್‌ಬಿ 91 ದಿನಾಂಕ 31:1:92ರ ಪ್ರಕಾರ ಕ್ರಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ 19,880 ಮನೆಗಳನ್ನು ಹಾಗೂ ನಗರ ಪ್ರದೇಶಗಳಲ್ಲಿ 10,000 ಮನೆಗಳನ್ನು ಈ ಯೋಜನೆಯಡಿ ಮಂಜೂರು ಮಾಡಿದೆ.

ಆ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಗ್ರಾಮೀಣ ಪ್ರದೇಶದಲ್ಲಿ 97ರಿಂದ 98ಮನೆಗಳನ್ನು ಮಂಜೂರು ಮಾಡಿದೆ ಮತ್ತು ನಗರ ಪ್ರದೇಶದಲ್ಲಿ ಸದರಿ ಪ್ರದೇಶದ ಜನಸಂಖ್ಯೆ ಆಧರಿಸಿ ಮನೆಗಳನ್ನು ಮಂಜೂರು ಮಾಡಲಾಗಿದೆ.

ಇ) ಕೆಲವು ಕ್ಷೇತ್ರಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರೂ ಸಹ ಕರ್ನಾಟಕ ಗೃಹ ಮಂಡಳಿ ಯಾವುದೇ ಮನೆ ಈ ಯೋಜನೆಯಡಿ ನಿರ್ಮಿಸಿಲ್ಲ. ಆದ್ದರಿಂದ ಸರ್ಕಾರಿ ಆದೇಶಸಂಖ್ಯೆ ಹೆಚ್‌ಯುಡಿ 138 ಪಿಹೆಚ್‌ಎಸ್ 91 ದಿನಾಂಕ 13:2:92 ಹಾಗೂ ಹೆಚ್‌ಯುಡಿ 239 ಕೆಹೆಚ್‌ಬಿ 91 ದಿನಾಂಕ 18:2:93ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಮನೆಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಗೃಹ ಮಂಡಳಿಯಿಂದ ಹಿಂದಕ್ಕೆ ಪಡೆದು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವಹಿಸಿದ್ದು ಫಲಾನುಭವಿಗಳ ಆಯ್ಕೆ ಕೆಲಸ ನಡೆದಿದೆ. ನಂತರ ಮನೆಗಳ ನಿರ್ಮಾಣ ಕಾರ್ಯ ಜಿಲ್ಲಾಧಿಕಾರಿಗಳ ಮುಖಾಂತರ ನಡೆಯಲಿದೆ.